'ಕಾಫಿ ಕುಡಿದು ನಿನ್ನ ಕಥೆ ಹೇಳು.'

'ಕಾಫಿ ಕೊಡು. ನಿನ್ನ ಫ್ಯಾಮಿಲಿ ಎಲ್ಲಿ?'

'ಅವಳು, ಮಕ್ಕಳು ಅವರಮ್ಮನ ಮನೆಗೆ ಹೋಗಿದ್ದಾರೆ. ನಾನೇ ಕಾಫಿ ಮಾಡ್ತೀನಿ' ಮಾಧವ ಕಾಫಿ ಹೀರುತ್ತಾ ಹೇಳಿದ. 'ನಮ್ಮ ತಂದೆ ಹೋಗುವ ವೇಳೆಗೆ ಎಲ್ಲರೂ ಮದುವೆಯಾಗಿ ಸೆಟ್ಲ್ ಆಗಿದ್ದರು. ನನಗೆ ಬಿ.ಎಸ್.ಸಿ. ಪಾಸ್ ಮಾಡಕ್ಕೂ ಆಗಲಿಲ್ಲ. ನಮ್ತಂದೆ ಟೀ.ನರಸೀಪುರದ ಹತ್ತಿರ ಜಮೀನು ನೋಡಿಕೋಂತ ಕಳಿಸಿದ್ರು. ನಾನು ಆ ಹಳ್ಳಿಯಲ್ಲಿ ಬೇಸಾಯ ಮಾಡಿಸ್ತಾ, ಕೈ ಬಾಯಿ ಸುಟ್ಕೊಂಡು ಇದ್ದೆ. ನನ್ನ ಮದುವೆಗೆ ಪ್ರಯತ್ನ ಮಾಡಿದರು ರೈತನಿಗೆ ನಮ್ಮ ಜಾತಿಯಲ್ಲಿ ಹೆಣ್ಣು ಕೊಡೋದುಂಟಾ? ಮದುವೆ ಆಗಲಿಲ್ಲ.

'ರೈತರಿಗೆ ಹೆಣ್ಣು ಸಿಗೋದು ಅಷ್ಟು ಕಷ್ಟಾನಾ?'

'ರೈತರಿಗೆ, ಪುರೋಹಿತರಿಗೆ ಯಾರೂ ಹೆಣ್ಣು ಕೊಡಲ್ಲ ಕಣೋ. ಅಪ್ಪ ಹೋದ ಮೇಲೆ ನಾನು ಹಳ್ಳಿಯಲ್ಲಿರಲು ಒಪ್ಪಲಿಲ್ಲ. ಸರಿ ಜಮೀನು ಮಾರಿದರು. ನಮ್ಮ ಅಣ್ಣ ನನಗೆ 20 ಲಕ್ಷ ಕೊಟ್ಟ. ಜಮೀನು ಮಾರಿದ್ದರಿಂದ ಒಬ್ಬೊಬ್ಬರಿಗೆ 20 ಲಕ್ಷ ಬಂದಿದೆ. ಇದನ್ನು ತೊಗೊಂಡು ಬೆಂಗಳೂರಿಗೆ ಹೋಗಿ, ಕೆಲಸ ಹುಡುಕಿಕೋ, ಮನೆ ಮಾರಾಟವಾದ ಮೇಲೆ ತಿಳಿಸ್ತೀನಿ' ಅಂದ. ನಾನು ಬೆಂಗಳೂರಿಗೆ ಒಂದು ಲಕ್ಷ ತೊಗೊಂಡು ಬಂದೆ. ಉಳಿದ ಹಣ ಮೈಸೂರಲ್ಲಿ ಬ್ಯಾಂಕ್‌ನಲ್ಲಿಟ್ಟಿದ್ದೆ.

'ಇಲ್ಲಿ ಕೆಲಸ ಸಿಕ್ಕಿತಾ?'

'ನಾನು ಪ್ರಯತ್ನಪಡಲಿಲ್ಲ. ಒಂದು ಹೋಟೆಲ್‌ನಲ್ಲಿ ನಾಲ್ಕು ದಿನ ಇದ್ದು ಸಿನಿಮಾ ನೋಡ್ದೆ. ಇಷ್ಟವಾದ ತಿಂಡಿ, ಊಟ ಮಾಡ್ದೆ. ಆಮೇಲೆ ಕಾಶಿಗೆ ಹೋಗೋಣಾಂತ ರೈಲು ಹತ್ತಿದೆ.

'ಕಾಶಿಗೆ ಹೋಗಿದ್ದೆಯಾ?'

'ಹುಂ. ಅಲ್ಲಿ ಒಂದು ವಾರವಿದ್ದು ಬೆಂಗಳೂರಿಗೆ ವಾಪಸ್ಸು ಬರಲು ರೈಲು ಹತ್ತಿದೆ. ರೈಲಿನಲ್ಲಿ ಜನಾರ್ಧನರೆಡ್ಡಿ ಅನ್ನುವವರು ಪರಿಚಯವಾದರು. ಅವರ ಮಗಳು ಬಾಲಾಮಣಿ ಅವರ ಜೊತೆ ಇದ್ದಳು. ಬಾಲಾಮಣಿ ಒಬ್ಬಳೇ ಮಗಳು. ರೆಡ್ಡಿಯವರು ಅನುಕೂಲವಾಗಿದ್ರು. ಆದರೆ ಬಾಲಾಮಣಿಗೆ ಮದುವೆ ಪ್ರಯತ್ನವನ್ನೇ ಮಾಡಿರಲಿಲ್ಲ.'

'ಯಾಕೆ?'

'ಜಾತಕ ದೋಷ. ನಿಮ್ಮ ಮಗಳು ಮದುವೆಯಾದ ಒಂದು ತಿಂಗಳಿಗೆ ಗಂಡ ಸತ್ತು ಹೋಗ್ತಾನೇಂತ ಹೇಳಿದ್ರಂತೆ. ಮಗಳು ವಿಧವೆ ಆದರೆ ಅವಳ ಗತಿ ಏನೂಂತ ಅವರು ಯೋಚಿಸ್ತಿದ್ರು. ನಾನು ಆ ಹುಡುಗೀನ್ನ ಮದುವೆ ಆಗ್ತೀನಿ&quon; ಅಂದೆ. ಅವರು ನನ್ನನ್ನು ಅನಂತಪುರಕ್ಕೆ ಕರ್ಕೊಂಡು ಹೋದ್ರು. ಅಲ್ಲಿ ನಮ್ಮ ಮದುವೆಯಾಯ್ತು. ಅವರು ಆಸ್ತಿಯನ್ನೆಲ್ಲಾ ಮಾರಿ ನಾಗರಬಾವೀಲಿ ದೊಡ್ಡ ಮನೆ ಕೊಂಡು ಕೊಟ್ರು. ನನಗೆ ಬಿಸಿನೆಸ್ ಮಾಡಲು ಬಂಡವಾಳ ಕೊಟ್ರು. ನಾನು ರಾಜರಾಜೇಶ್ವರಿ ನಗರದಲ್ಲಿ ಬಾಲಾಮಣಿ ರೆಸ್ಟೋರೆಂಟ್ ಅಂತ ಹೋಟೆಲ್ ಆರಂಭಿಸಿದ್ದೀನಿ. ನಮಗೆ ಇಬ್ಬರು ಮಕ್ಕಳು. ನಮ್ಮ ಮಾವ ಹೋಗಿಬಿಟ್ಟರು. ಒಟ್ಟಿನಲ್ಲಿ ನಾನೀಗ ಚೆನ್ನಾಗಿ ಸೆಟ್ಲ್ ಆಗಿದ್ದೇನೆ.'

'ನಿನ್ನನ್ನು ಯಾಕೆ ನಿನ್ನ ಅಣ್ಣತಮ್ಮ, ಅಕ್ಕ ತಂಗಿಯರು ಮಾತಾಡಿಸಲ್ಲ?'

'ನಾನು ರೆಡ್ಡಿ ಹುಡುಗೀನ್ನ ಮದುವೆಯಾಗಿರೋದ್ರಿಂದ ಜಾತಿಭ್ರಷ್ಟನಾಗಿದ್ದೇನೆ. ಅದಕ್ಕೆ ಮಾತಾಡಿಸಲ್ಲ.'

'ಛೆ...ಛೆ...'

'ಅದರಿಂದ ನಷ್ಟವೇನಿಲ್ಲ ಬಿಡು. ನನ್ನದು ಸಸ್ಯಾಹಾರಿ ಹೋಟೆಲ್. ನನ್ನ ಹೋಟೆಲ್ ಚೆನ್ನಾಗಿ ನಡೆಯುತ್ತಿದೆ. ಸದ್ಯದಲ್ಲೇ ಇನ್ನೊಂದು ಬ್ರಾಂಚ್ ತೆಗೆಯಬೇಕೂಂತಿದ್ದೇನೆ.'

'ವೆರಿಗುಡ್.'

'ಈಗ ನಮ್ಮ ಹೋಟೆಲ್‌ನಿಂದ ಊಟ ಬರತ್ತೆ. ನೀನೇ ರುಚಿ ನೋಡು.'

'ಸರಿಯಪ್ಪ' ಎಂದ ಆನಂದ. ಒಂದು ಗಂಟೆಗೆ ಒಂದು ಹುಡುಗ ಊಟ ತಂದು ಇಬ್ಬರಿಗೂ ಬಡಿಸಿದ. ಊಟ ತುಂಬಾ ಚೆನ್ನಾಗಿತ್ತು. ಬೀಡ ಜಗಿಯುತ್ತಾ ಮಾಧವ ಹೇಳಿದ.



'ನಿನಗೊಂದು ವಿಷಯ ಗೊತ್ತಾ?'

'ಏನು?'

ಶಂಕರ, ಅವನ ಫ್ಯಾಮಿಲಿ ಬೆಂಗಳೂರಿಗೆ ಬಂದ್ರೆ ನಮ್ಮ ಹೋಟೆಲ್‌ನಲ್ಲೇ ಇಳಿದುಕೊಳ್ತಾರೆ. ಶಂಕರನ ಮಗ ಇನ್ಮುಂದೆ ನಮ್ಮನೆಯಲ್ಲೇ ಇರ್ತಾನೆ.

'ಹೌದಾ?'

ಸಾವಿತ್ರಿ ಅಷ್ಟು ಅನುಕೂಲವಾಗಿಲ್ಲ. ಅವಳಿಗೆ ಹಣಕಾಸಿನ ಸಹಾಯ ಮಾಡ್ತಿರ್ತೇನೆ. ಇಬ್ಬರು ಹೆಣ್ಣು ಮಕ್ಕಳ ಜವಾಬ್ದಾರಿ ಅವಳ ಮೇಲಿದೆ. ನಾನೇ ಸಪೋರ್ಟ್ ಮಾಡಬೇಕು.

'ಗಾಯಿತ್ರಿ?'

'ಗಾಯಿತ್ರಿ ಗಂಡ ನಮ್ಮ ರಾಘವನ ಹಾಗೆ ತುಂಬಾ ಸ್ಟ್ರಿಕ್ಟ್. ಅದಕ್ಕೆ ತುಂಬಾ ಹೆದರ್ತಾಳೆ. ಒಂದು ಸಲ ಶಂಕರಂಗೆ ಕರೆದುಕೊಂಡು ಬಾ ಅಂತ ಹೇಳಿದ್ದೇನೆ. ನೋಡಬೇಕೋ ಏನ್ಮಾಡ್ತಾಳೋ? ರಾಘವ ಕೊಂಚ ಮನಸ್ಸು ಮಾಡಿದರೆ ಎಲ್ಲಾ ಸರಿಹೋಗಬಹುದು. ಆ ಕಾಲಾನೂ ದೂರವಿಲ್ಲಾಂತ ಕಾಣತ್ತೆ. ಅವನು ಬೆಂಗಳೂರಲ್ಲಿ ಒಂದು ಮನೆ ನೋಡಿದ್ದಾನೆ. ಒಂದು ಕೋಟಿ ಹೇಳ್ತಿದ್ದಾರೆ. ಅವನ ಹತ್ತಿರ 50 ಲಕ್ಷ ಇದೆಯಂತೆ. ಬ್ಯಾಂಕ್‌ನಲ್ಲಿ ಲೋನ್ ಸಿಗತ್ತೆ. ಬಡ್ಡಿ ಜಾಸ್ತಿ. ಅದಕ್ಕೆ ಶಂಕರನಿಗೆ ನಾನೇ ಹೇಳಿದೆ.'

'ಅವನು ಮಾತಾಡದಿದ್ರೆ ಬೇಡ. 50 ಲಕ್ಷ ಬಡ್ಡಿ ಇಲ್ಲದ ಸಾಲ ಕೊಡ್ತೀನಿ. ನಿಧಾನವಾಗಿ ತೀರಿಸಲು ಹೇಳೂಂತ.'

'ರಾಘವ ಒಪ್ಪಿದ್ದಾನಾ?'

'ಒಪ್ತಾನೆ ಅನ್ನುವ ಭರವಸೆ ನನಗಿದೆ' ಎಂದು ಮಾಧವ ಜೋರಾಗಿ ನಕ್ಕ.

'ಯಾಕೋ ನಗ್ತೀಯಾ?'

'ಈ ಸಂಬಂಧಗಳು ಅರ್ಥವಾಗೋದೇ ಇಲ್ಲ. ಆನಂದ ಸಂಪ್ರದಾಯಕ್ಕಾಗಿ ಸಂಬಂಧಬೇಡ. ಆದರೆ ದುಡ್ಡಿಗಾಗಿ ಸಂಬಂಧ ಬೇಕು. ಎಷ್ಟು ವಿಚಿತ್ರ ಅಲ್ವಾ?'

'ಏನೋ ಹಾಗಂದ್ರೆ?'

'ನಾನು ನಮ್ಮ ಕುಟುಂಬದಲ್ಲಿ ಕೆಲವು ವಿಚಾರಗಳಿಗೆ ಪ್ಲಸ್ ಕೆಲವು ವಿಚಾರಗಳಿಗೆ ಮೈನಸ್ ಎಷ್ಟು ವಿಚಿತ್ರ ನೋಡು.'

'ನನಗೆ ಅರ್ಥವಾಗುವ ಹಾಗೆ ಹೇಳಪ್ಪಾ?'

'ನಮ್ಮನೆಯ ಪೂಜೆ, ಪುನಸ್ಕಾರ, ವ್ರತ, ಹೋಮಗಳಿಗೆ, ಹಬ್ಬ ಹರಿದಿನಗಳಿಗೆ ಕೊನೆಗೆ ನಮ್ಮ ಅಪ್ಪ ಅಮ್ಮನ ತಿಥಿಗೆ ನಾನು ಹೋಗುವಂತಿಲ್ಲ. ಆದರೆ ದೊಡ್ಡಕ್ಕನ ಮಕ್ಕಳ ಮದುವೆಗೆ ನನ್ನ ಹಣ ಬೇಕು, ಶಂಕರನ ಮಕ್ಕಳ ಓದಿಗೆ ಸಹಾಯ ಮಾಡಲು ನಾನು ಬೇಕು. ಈಗ ರಾಘವ ಮನೆ ತೆಗೆದುಕೊಳ್ಳಲು ನನ್ನ ಸಹಾಯ ಬೇಕು.'

'ನಿಮ್ಮಣ್ಣನಿಗೆ ನೀನು ಹಣ ಕೊಡುವುದು ಗೊತ್ತಿಲ್ಲದೇ ಇರಬಹುದು.'

'ಯಾವ ಮುಠ್ಠಾಳ ಬಡ್ಡಿ ಇಲ್ಲದೆ ಸಾಲ ಕೊಡ್ತಾನೆ ಹೇಳು. ರಾಘವಣ್ಣ ತುಂಬಾ ಬುದ್ಧಿವಂತ. ಇಬ್ಬರು ಮಕ್ಕಳೂ ಬೆಂಗಳೂರಲ್ಲಿ ಸೆಟ್ಲ್ ಆಗ್ತಿದ್ದಾರೆ. ಮನೆ ತೆಗೆದುಕೊಂಡರೆ ಬಾಡಿಗೆ ಕೊಡೋದು ತಪ್ಪುತ್ತದೆ. ಅವನು ನಿವೃತ್ತಿಯಾದಾಗ ಬರುವ ಹಣದಿಂದ ಮನೆ ಮೇಲೆ ಮನೆ ಕಟ್ಟಿದರೆ ಇಬ್ಬರು ಮಕ್ಕಳಿಗೂ ಮನೆ ಮಾಡಿದಂತಾಗುತ್ತದೆ. ಇವನೂ ಆರಾಮವಾಗಿರಬಹುದು.

'ರಾಘವನ ಹತ್ತಿರ ಅಷ್ಟೊಂದು ಹಣ ಎಲ್ಲಿಂದ ಬಂತು?'

'ಅವನು ನಮ್ಮ ತಂದೆ ತರಹ ಜಾತಕ ನೋಡ್ತಾನೆ, ಶಾಸ್ತ್ರ ಹೇಳ್ತಾನೆ, ಮುಹೂರ್ತ ಇಟ್ಟುಕೊಡ್ತಾನೆ. ಸತ್ಯನಾರಾಯಣನ ಪೂಜೆ, ಗೃಹಪ್ರವೇಶ ಇತ್ಯಾದಿಗಳಿಗೆ ಪುರೋಹಿತನಾಗಿ ಹೋಗ್ತಾನೆ. ಅದರಿಂದ ಸಾಕಷ್ಟು ಆದಾಯವಿದೆ.'

'ನಿನಗೆ ಅವರೆಲ್ಲರ ಸ್ವಭಾವ ಗೊತ್ತಿದ್ದೂ ಯಾಕೆ ಸಹಾಯ ಮಾಡ್ತೀಯಾ?'

'ಗೊತ್ತಿಲ್ಲ ಕಣೋ. ಇದನ್ನೇ ಕರುಳ ಸಂಬಂಧ ಅಂತಾರೇನೋ? ನನ್ನ ಮಕ್ಕಳ ಕಾಲದಲ್ಲಾದರೂ ನಾವೆಲ್ಲಾ ಪುನಃ ಒಂದಾಗಬಹುದೇನೋ ಎನ್ನುವ ಆಸೆ, ನಂಬಿಕೆ.'

'ನಿನ್ನ ನಂಬಿಕೆ ನಿಜವಾಗಲೀಂತ ಹಾರೈಸ್ತೀನಿ ಮಾಧು' ಅವನ ಕೈಹಿಡಿದು ಹೇಳಿದ ಆನಂದ. ಮಾಧವ ಮಾತಾಡಲಿಲ್ಲ. ಆದರೆ ಅವನ ಕಣ್ಣಂಚಿನಲ್ಲಿ ನೀರಿರುವುದನ್ನು ಆನಂದ ಗಮನಿಸಿದ. ಅವನೂ ಮಾತನಾಡದೆ ಸಂತೈಸುವವನಂತೆ ಗೆಳೆಯನ ಭುಜ ತಟ್ಟಿದ.

ಪ್ರತಿಕ್ರಿಯಿಸಿ: **feedback@sudha.co.in**